ಮಾರನೆಯ ಬೆಳಿಗ್ಗೆ ಆ ಹುಡುಗಿಯರು ನೀರನ್ನು ತರಲು ಆ ಕೊಡಗಳನ್ನು ತೆಗೆದುಕೊಂಡು ಆಗಸದಿಂದ ಭೂಮಿಯ ಕಡೆಗೆ ಹೊರಟರು. ಬಾವಿ ಬಳಿಗೆ ಬಂದು ನೀರು ತುಂಬಿಕೊಳ್ಳಲು ತಮ್ಮ ಕೊಡಗಳನ್ನು ಬಾವಿಯೊಳಗೆ ಬಿಟ್ಟರು. ಆಗ ಕಪ್ಪೆಯು ತಾನು ಅಡಗಿದ್ದ ಕೊಡವೊಂದರಿಂದ ಹೊರಬಂದು ನೀರಿನ ತಳಕ್ಕೆ ಹೋಗಿ ಕುಳಿತಿತು. ನಂತರ ಆ ಹುಡುಗಿಯರು ನೀರನ್ನು ತುಂಬಿಸಿಕೊಂಡು ಆಕಾಶಕ್ಕೆ ಮರಳಿದರು.

ಈಗ ಕಪ್ಪೆಯು ಬಾವಿಯಿಂದ ಹೊರಗೆ ಬಂದಿತು. ಅಲ್ಲಿಂದ ತನ್ನ ಊರಿಗೆ ಬಂತು. ಅದು ಅಲ್ಲಿ ತನ್ನ ಮನೆಯಲ್ಲಿ ಸೂರ್ಯ ಮುಳುಗುವವರೆಗೂ ಅದು ಕಾಯ್ತು. ಸೂರ್ಯ ಮುಳುಗಿ ಕತ್ತಲಾಯಿತು. ಆಗ ಅದು ತನಗೆ ತಾನೇ 'ಈ ಕಾಗದವನ್ನು ಈಗ ಒಯ್ಯುವ' ಅಂದುಕೊಂಡು ತನ್ನ ಮನೆಯಿಂದ ಹೊರಗೆ ಬಂದು ಕಿಮನ್ಯೂಜ್‌ನ ಮಗನ ಮನೆಯ ಕಡೆಗೆ ಹೊರಟಿತು. ಹೋಗಿ ಅವನ ಮನೆಯ ಬಳಿಗೆ ಬಂದು ಬಾಗಿಲನ್ನು ಬಡಿಯಿತು. ಕಿಮನ್ಯೂಜ್‌ನ ಮಗ 'ಯಾರದು?' ಎನ್ನುತ್ತಾ ಬಾಗಿಲು ತೆಗೆದ.

'ನಾನು ಮೈನು, ಕಪ್ಪೆ'.

'ಒಳಗೆ ಬಾ' ಎಂದು ಅವನು ಕಪ್ಪೆಯನ್ನು ಒಳಗೆ ಕರೆದ.

ಒಳಗೆ ಬಂದ ಕಪ್ಪೆ ತಾನು ತಂದಿದ್ದ ಆ ಕಾಗದವನ್ನು ಅವನಿಗೆ ಕೊಟ್ಟು ಹೊರಟು ಹೋಯಿತು. ಆಗ ಆತ ಆ ಕಾಗದವನ್ನು ಒಡೆದು ಓದಿದ. ಓದಿದ ಕಾಗದವನ್ನು ತನ್ನ ಪೆಟ್ಟಿಗೆಯಲ್ಲಿ ಇಟ್ಟ.

ಇದು ನಡೆದು ಆರು ದಿನಗಳು ಕಳೆದಿದ್ದವು. ನಂತರ ಆತ ಹೆಚ್ಚಿನ ಹಣವನ್ನು ಹೊಂದಿಸಿಕೊಂಡು ಕಪ್ಪೆಯನ್ನು ಕರೆದ.

ಕಪ್ಪೆ ಬಂತು. ಆತ ಮತ್ತೆ ಒಂದು ಕಾಗದವನ್ನು ಬರೆದಿದ್ದ. ಅದರಲ್ಲಿ ಆತ, 'ನಿಮಗೆ ನನ್ನ ತಂದೆತಾಯಿಗಳು ಹಣವನ್ನು ಕಳುಹಿಸಿಕೊಡುತ್ತಿದ್ದಾರೆ. ನಾನೇ ಆದಷ್ಟು ಬೇಗನೆ ಬರುತ್ತೇನೆ. ಒಂದು ದಿನ ಬಂದು ನಿಮ್ಮ ಮಗಳನ್ನು ಮದುವೆ ಮಾಡಿಕೊಂಡು ನಮ್ಮ ಮನೆಗೆ ಕರೆದುಕೊಂಡು ಬರುತ್ತೇನೆ' ಎಂದು.

ಆತ ಹೀಗೆ ಬರೆದ ಕಾಗದ ಮತ್ತು ಹೊಂದಿಸಿದ್ದ ಹಣ ಎರಡನ್ನೂ ಕಪ್ಪೆಯ ಮೂಲಕ ಸೂರ್ಯದೇವನಿಗೆ ಕಳುಹಿಸಿದನು.

ಕಪ್ಪೆ ಅಲ್ಲಿಂದ ನೇರವಾಗಿ ಬಾವಿಗೆ ಬಂದಿತು. ಆಗ ಎಂದಿನಂತೆ ಹುಡುಗಿಯರು ನೀರಿಗೆ ಬಂದರು. ಆಗ ಕಪ್ಪೆ ಎಂದಿನಂತೆ ಅವರ ಕೊಡದಲ್ಲಿ ಕೂತು ಆಗಸಕ್ಕೆ ಹೋಯಿತು. ಅಲ್ಲಿ ಆ ಹುಡುಗಿಯರು ತಾವು ತಂದ ಕೊಡಗಳನ್ನು ಎಂದಿನಂತೆ ಮಾಮೂಲು ಜಾಗದಲ್ಲಿ ಇಟ್ಟು ಹೋದರು. ಆಗ ಕಪ್ಪೆ ಎಂದಿನಂತೆ ಕೊಡದಿಂದ ಹೊರಬಂದು ತಾನು ತಂದಿದ್ದ ಕಾಗದ ಮತ್ತು ಹಣವನ್ನು ಮೇಜಿನ ಮೇಲೆ ಇಟ್ಟು ಮೂಲೆಯಲ್ಲಿ ಅವಿತುಕೊಂಡಿತು.

ಸೂರ್ಯದೇವ ರೂಮಿನ ಒಳಕ್ಕೆ ಬಂದ. ಮೇಜಿನ ಮೇಲೆ ಇದ್ದ ಕಾಗದ ಮತ್ತು ಹಣವನ್ನು ನೋಡಿ ಎತ್ತಿಕೊಂಡನು; ಅವೆರಡನ್ನೂ ತೆಗೆದುಕೊಂಡು ಹೋಗಿ ತನ್ನ ಹೆಂಡತಿ ಚಂದ್ರಮಳಿಗೆ ತೋರಿಸಿದ. ಅದನ್ನು ನೋಡಿ ಚಂದ್ರಮ, 'ತುಂಬಾ ಒಳ್ಳೆಯದು' ಎಂದಳು.

ಅನಂತರ ಅವರು ಎಳೆ ಹಂದಿಯನ್ನು ಕಡಿದು ಅದರ ಅಡುಗೆಯನ್ನು ತಯಾರಿಸಿದರು. ಆ ಅಡುಗೆಯನ್ನು ಎಂದಿನಂತೆ ಅವರು ಮೇಜಿನ ಮೇಲೆ ಇಟ್ಟು ಬಾಗಿಲು ಮುಚ್ಚಿ ಹೋದರು.

ಆಗ ರೂಮಿನ ಮೂಲೆಯಲ್ಲಿ ಅಡಗಿದ್ದ ಕಪ್ಪೆ ಬಂದು ಮೇಜಿನ ಮೇಲೆ ಇಟ್ಟಿದ್ದ ಊಟವನ್ನು ತಿಂದು ಅಲ್ಲಿದ್ದ ಖಾಲಿ ಕೊಡದೊಳಗೆ ಹೋಗಿ ಅಡಗಿ ಕೂತು ಹಾಯಾಗಿ ನಿದ್ದೆ ಹೋಯಿತು.

ಮಾರನೆಯ ಬೆಳಿಗ್ಗೆ ಆ ಹುಡುಗಿಯರು ಬಂದು ಆ ಕೊಡಗಳನ್ನು ತೆಗೆದುಕೊಂಡು ಭೂಮಿಗೆ ಹೊರಟರು. ಬಾವಿಯ ಬಳಿಗೆ ಬಂದು ಕೊಡಗಳನ್ನು ಬಾವಿಗೆ ಬಿಟ್ಟರು. ಆಗ ಕಪ್ಪೆ ಕೊಡದೊಳಗಿನಿಂದ ಈಚೆಗೆ ಬಂದು ನೀರಿನ ತಳಕ್ಕೆ ಹೋಗಿ ಕೂತು ಸುಧಾರಿಸಿಕೊಂಡಿತು. ಆ ಮೇಲೆ ಆ ಹುಡುಗಿಯರು ನೀರನ್ನು ತುಂಬಿಕೊಂಡು ಆಗಸಕ್ಕೆ ಹೊರಟು ಹೋದರು.

ಆಮೇಲೆ ಕಪ್ಪೆ ಬಾವಿಯಿಂದ ಹೊರಬಂದು ಊರಿಗೆ ಹೊರಟು ತನ್ನ ಮನೆ ತಲುಪಿತು. ಮನೆಯಲ್ಲಿ ಮಲಗಿ ನಿದ್ದೆ ತೆಗೆಯಿತು. ಮಾರನೆಯದಿನ ಬೆಳಿಗ್ಗೆ ಕಿಮನ್ಯೂಜ್‌ನ ಮಗನನ್ನು ಭೇಟಿ ಮಾಡಿ ಅವನಿಗೆ, 'ಯುವಕನೇ, ನೀನು ಕೊಟ್ಟಿದ್ದ ಕಾಗದ, ಹಣ ಎಲ್ಲಾ ಕೊಟ್ಟೆ. ಅದನ್ನೆಲ್ಲಾ ಅವರು ಸ್ವೀಕರಿಸಿದರು. ಆಮೇಲೆ ಅವರು ನನಗೆ ಎಳೆ ಹಂದಿ ಮಾಂಸದ ಅಡಿಗೆ ಮಾಡಿ ಬಡಿಸಿದರು. ನಾನೂ ಅದನ್ನು ಉಂಡೆ. ಈಗ ನೀನು,